**ಅಸಲು ದಾವಾ ಸಂಖ್ಯೆ: 55/2020** **ಪಿ.ಡಬ್ಲ್ಯೂ : 1**

ದಿನಾಂಕ: **31-08-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ವಾದಿಯರ ಪರ ವಕೀಲರಿಂದ :**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

ದಿನಾಂಕ 10-11-1927 ರ ಕ್ರಯಪತ್ರದ ದೃಡೀಕೃತ ನಕಲನ್ನು ನಿಪಿ 1 ಎಂದು , ಆಕಾರಬಂದ್ ದಾಖಲೆಯ ದೃಡೀಕೃತ ನಕಲನ್ನು ನಿಪಿ 2 ಎಂದು , ರೆಕಾರ್ಡ್ಸ್ ಆಫ ರೈಟ್ಸನ ದೃಡೀಕೃತ ನಕಲನ್ನು **ನಿಪಿ 3 ಎಂದು** , ಸರ್ವೆನಂಬರ 11/1 , 11/ಪಿ1, 11 ಪಿ2 ರ ಗಣಕೀಕೃತ ಪಹಣಿ ಪತ್ರಿಕೆಗಳನ್ನು **ನಿಪಿ 4 ರಿಂದ 6 ಎಂದು** , ಸರ್ವೆನಂಬರ 11/1 ರ ಕೈಬರಹ ಪಹಣಿ ದೃಡೀಕೃತ ಪತ್ರಿಕೆಗಳನ್ನು **ನಿಪಿ 7 ರಿಂದ 10** ಎಂದು, ಕಂದಾಯ ಪಾವತಿ ರಶೀದಿಗಳನ್ನು ನಿಪಿ 11 ರಿಂದ 14 ಎಂದು , ಪೋಟೋ ಮತ್ತು ಸಿಡಿಗಳನ್ನು **ನಿಪಿ 15 ರಿಂದ 25** ಎಂದು ಗುರುತಿಸಲಾಯಿತು.

**ಪಾಟೀಸವಾಲು : ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲು ಮುಂದೂಡಲಾಯಿತು.**

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ನಾಗಮಂಗಲ.**